ಈ) ಆಯವ್ಯಯದಲ್ಲಿ ಕಬಿನಿ ಯೋಜನೆಗೆ ನಿಗಧಿಪಡಿಸಲಾದ ಅನುದಾನದಲ್ಲಿ ಈ ಕಾಮಗಾರಿಗೆ ಅನುದಾನ ಒದಗಿಸಲಾಗುವುದು.

ಉ) ಈ ಯೋಜನೆಯ ಅಂದಾಜಿಗೆ ಮಂಜೂರಾತಿ ದೊರಕಿದ್ದು, ಟೆಂಡರ್ ಕರೆಯಲಾಗುತ್ತಿದೆ.

ಊ) ಈ ಯೋಜನೆಯನ್ನು 2001-02ನೇ ಸಾಲಿನಲ್ಲಿ ಪೂರ್ಣಗೊಳಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.

ಆಸುಂಡಿ ನಾಲಾ ಬಂದರು

812 - ಶ್ರೀ ಕೋಳಿವಾಡ್ ಕೃಷ್ಣಪ್ಪ ಭೀಮಪ್ಪ (ರಾಣೆಬೆನ್ನೂರು) : ಮಾನ್ಯ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಣೆಬೆನ್ನೂರು ತಾಲ್ಲೂಕಿನ ಆಸುಂಡಿ ನಾಲಾ ಬಂದರನ್ನು ಆಯವ್ಯಯದಲ್ಲಿ ಸೇರಿಸಲಾಗಿದೆಯೇ?*

ಆ) *ಹಾಗಿದ್ದಲ್ಲಿ ಈ ವರ್ಷ ಅದಕ್ಕೆ ಪೂರ್ಣ ಅನುದಾನ ಬಿಡುಗಡೆ ಮಾಡಿ ಪೂರ್ಣಗೊಳಿಸಲಾಗುವುದೇ?*

ಶ್ರೀ ಎಸ್. ಕುಮಾರ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) 0.01ರಷ್ಟು ಅನುದಾನದೊಂದಿಗೆ ಸೇರಿಸಲಾಗಿದೆ.

ಆ) ಈ ವರ್ಷ ಸಾಂಕೇತಿಕ ಅನುದಾನ (1 ಸಾವಿರ) ಇರುವುದರಿಂದ ಕಾಮಗಾರಿಯನ್ನು ಕೈಗೊಳ್ಳಲು ಸಾಧ್ಯವಾಗುವುದಿಲ್ಲ.

ಗಾಜನೂರ ಹತ್ತಿರ ಕಟ್ಟುತ್ತಿರುವ ಅಣೆಕಟ್ಟು

814 - ಶ್ರೀ ಕೋಳಿವಾಡ್ ಕೃಷ್ಣಪ್ಪ ಭೀಮಪ್ಪ (ರಾಣೆಬೆನ್ನೂರು) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತುಂಗಾ ಮೇಲ್ದಂಡೆ ಯೋಜನೆಯಲ್ಲಿ ಗಾಜನೂರ ಹತ್ತಿರ ಕಟ್ಟುತ್ತಿರುವ ಅಣೆಕಟ್ಟು ಯಾವ ಹಂತದಲ್ಲಿದೆ, ಅದರ ಯೋಜನಾ ವೆಚ್ಚವೆಷ್ಟು? ಎಂದು ಮುಗಿಯುತ್ತದೆ.*

ಆ) *ಹಾವೇರಿ ಜಿಲ್ಲೆಯಲ್ಲಿನ ಕಾಲುವೆಗಳ ಉದ್ದ ಅಳತೆ ಎಷ್ಟು?*

ಇ) *ಹಾವೇರಿ ಜಿಲ್ಲೆಯಲ್ಲಿ ಸುರಂಗ ಮಾರ್ಗವೆಷ್ಟು ಉದ್ದ ಅಳತೆ ಇದೆ ಅದನ್ನು ಎಂದು ಪ್ರಾರಂಭಿಸಲಾಗುತ್ತದೆ?*

ಈ) *ಈ ಯೋಜನೆಯನ್ನು ಪೂರ್ಣಗೊಳಿಸಿ ರೈತರ ಹೊಲಗಳಿಗೆ ನೀರು ಸರಬರಾಜು ಮಾಡುವುದು ಎಂದು?*